FEBRUARY 17, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ಮಿಷನ್ ವಿದ್ಯಾಕಾಶಿ; 10ನೇ ತರಗತಿ ಫಲಿತಾಂಶ ಸುಧಾರಣೆಗೆ, ಧಾರವಾಡ ಐ.ಐ.ಟಿ. ತಜ್ಞರಿಂದ ಮಾರ್ಗದರ್ಶನ.
- ರಾಜ್ಯದ ನೀರಾವರಿ ಯೋಜನೆಗಳ, ಕಾಲಮಿತಿ ಅನುಷ್ಠಾನಕ್ಕೆ, ಕೇಂದ್ರದ ಮನವೊಲಿಸುವಂತೆ, ದೇವೇಗೌಡರಿಗೆ, ಸಿದ್ದರಾಮಯ್ಯ ಮನವಿ.
- ಉತ್ತರ ಕರ್ನಾಟಕದ ವಲಸೆ ಕಾರ್ಮಿಕರಿಗೆ, ರಕ್ಷಣೆ ಒದಗಿಸಲು, ಗೋವಾ ಮುಖ್ಯಮಂತ್ರಿಗೆ, ರಾಜ್ಯ ಸರ್ಕಾರದ ಮನವಿ.
- ಲೋಕೋಪಯೋಗಿ ಇಲಾಖೆಯಿಂದ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ, ವಾಹನ ಗಣತಿ ಕಾರ್ಯ, ಈ ಬೆಳಗ್ಗೆ ಆರಂಭ.

<><><>

ಈಗ ವಾರ್ತೆಗಳ ವಿವರ

<><><>

ಪ್ರಸಕ್ತ ಶೈಕ್ಷಣಿಕ ವರ್ಷದ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ, ವಿದ್ಯಾರ್ಥಿಗಳು ಹೆಚ್ಚು ಅಂಕ ಹಾಗೂ ರ್‍ಯಾಂಕ್‌ಗಳನ್ನು ಗಳಿಸಿ, ರಾಜ್ಯದ ಫಲಿತಾಂಶ ಪಟ್ಟಿಯಲ್ಲಿ, ಧಾರವಾಡ ಜಿಲ್ಲೆ ಅಗ್ರ ಸ್ಥಾನ ಪಡೆಯಲು ಸಾಧ್ಯವಾಗುವಂತೆ, ಐ.ಐ.ಟಿ. ಧಾರವಾಡದ ಶಿಕ್ಷಣ ತಜ್ಞರ ಮೇಲುಸ್ತುವಾರಿಯಲ್ಲಿ, ಜಿಲ್ಲಾಡಳಿತ, 'ಮಿಷನ್ ವಿದ್ಯಾಕಾಶಿ' ಯೋಜನೆ, ಜಾರಿಗೊಳಿಸಿದೆ.

ಈ ಕುರಿತು ಒಂದು ವರದಿ..

<><><>

*ಫಲಿತಾಂಶ ಸುಧಾರಣೆ ನಿಟ್ಟಿನಲ್ಲಿ ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ, ಜಿಲ್ಲಾಡಳಿತದ ವತಿಯಿಂದ ಜಾರಿಗೆ ತರಲಾದ 'ವಿದ್ಯಾಕಾಶಿ' ಯೋಜನೆಯ ಮೂಲಕ ವಿಜ್ಞಾನ, ಗಣಿತ, ಆಂಗ್ಲ ಭಾ ೆ ಸಹಿತ ವಿವಿಧ ವಿ ಯಗಳಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಕಲಿಕಾ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತಿದೆ. ಮಾತ್ರವಲ್ಲ ಶಿಕ್ಷಣ ಇಲಾಖೆ ಮೂಲಕ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.*

*ಈ ಯೋಜನೆಗೆ ಶಾಲಾ ಗುಣಮಟ್ಟ ಸುಧಾರಣೆ ಮತ್ತು ಮೇಲುಸ್ತುವಾರಿ ಸಮಿತಿ, ಪೋಷಕರು, ತಜ್ಞರು ಸಹಕರಿಸುತ್ತಿದ್ದು, ಯೋಜನೆಯ ಯಶಸ್ಸಿಗೆ ಕೈ ಜೋಡಿಸಿದ್ದಾರೆ. ಹಿರಿಯ ವಿಜ್ಞಾನಿ ಹಾಗೂ ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆಯ ವಿಸ್ತರಣಾಂಗದ ವಿದ್ಯಾಧಿಕಾರಿ ಹಾಗೂ ವಿದ್ಯಾಕಾಶಿ ತಜ್ಞ ಸಮಿತಿ ಸದಸ್ಯ ಪ್ರೊಫೆಸರ್ ಎಸ್. ಎಂ ಶಿವಪ್ರಸಾದ ಅವರು ಯೋಜನೆಯ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.*

<><><>

ವಿವೇಕ ಧ್ವನಿ 50 ಸೆಕೆಂದು + ಪ್ರೊ.ಎಸ್.ಎಂ ಶಿವಪ್ರಸಾದ ಧ್ವನಿ 60 ಸೆಕೆಂದು

<><><>

ಹೊಸ ನೀರಾವರಿ ಯೋಜನೆಗಳನ್ನು ರಾಜ್ಯದಲ್ಲಿ ಆರಂಭಿಸುವ ಮೊದಲು, ಅಪೂರ್ಣ ನೀರಾವರಿ ಯೋಜನೆಗಳನ್ನು, ತ್ವರಿತವಾಗಿ ಪೂರ್ಣಗೊಳಿಸಲು, ಕೇಂದ್ರದ ಮನವೊಲಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ಅವರಿಗೆ ಮನವಿ ಮಾಡಿದ್ದಾರೆ. ನೀರಾವರಿ ಯೋಜನೆಗಳಿಗೆ ಸಂಬಂಧಿಸಿ, ರಾಜ್ಯದ ಪರವಾಗಿ ಧ್ವನಿ ಎತ್ತಿ, ಪಕ್ಷಾತೀತವಾಗಿ ಆಗ್ರಹಿಸಲು, ಎಚ್.ಡಿ.ದೇವೇಗೌಡರ ಕರೆ, ಸ್ವಾಗತಾರ್ಹ ಎಂದು, ಮುಖ್ಯಮಂತ್ರಿ ಶ್ಲಾಘಿಸಿದ್ದಾರೆ. ಕೃಷ್ಣ ಮತ್ತು ಕಾವೇರಿ ನದಿ ಜೋಡಣೆ, ನೀರಾವರಿ ಯೋಜನೆಯ ಬಗ್ಗೆ, ಜೆ.ಡಿ.ಎಸ್. ವರಿಷ್ಠ ದೇವೇಗೌಡ ಅವರ ನಿಲುವು, ಅಭಿನಂದನೀಯ. ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಮತ್ತು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟು ಯೋಜನೆಯನ್ನು ರೂಪಿಸಲಾಗಿದೆ. ಕೇಂದ್ರದ ಅನುಮತಿಗಾಗಿ, ಕಾಯಲಾಗುತ್ತಿದೆ ಎಂದು, ಮುಖ್ಯಮಂತ್ರಿ ಸ್ಪಷ್ಟ ಪಡಿಸಿದ್ದಾರೆ.

<><><>

ರಾಜ್ಯದ ನೀರಾವರಿ ಯೋಜನೆಗಳ ಕಾಲಮಿತಿ ಅನುಷ್ಠಾನದಲ್ಲಿ, ದೇವೇಗೌಡರ ಹೋರಾಟಕ್ಕೆ, ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಮೈಸೂರು ಜಿಲ್ಲೆ, ನಂಜನಗೂಡು ಸಮೀಪದ, ಬಿದರಗೋಡಿನ ಕಬಿನಿ ನದಿ ಯೋಜನಾ ಸ್ಥಳಕ್ಕೆ ಭೇಟಿ ನೀಡಿ, ಜಲ ಶುದ್ಧೀಕರಣ ಘಟಕಗಳ ನಿರ್ಮಾಣ ಕಾಮಗಾರಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಪರಿಶೀಲಿಸಿದರು. ಮೈಸೂರು ನಗರಕ್ಕೆ, ಕಬಿನಿ ನದಿ ಮೂಲದಿಂದ, ಕುಡಿಯುವ ನೀರನ್ನು ಪೂರೈಸುವ ಯೋಜನೆಯನ್ನು, 3 ಹಂತದಲ್ಲಿ ಒಟ್ಟು 184 ಎಂ.ಎಲ್.ಡಿ ಸಾಮರ್ಥ್ಯಕ್ಕೆ ಹೆಚ್ಚಿಸಿ, ಅಭಿವೃದ್ಧಿಪಡಿಸಲು, ವಿನ್ಯಾಸ ಮಾಡಲಾಗಿದೆ ಎಂದು, ಸಚಿವರು ತಿಳಿಸಿದರು.

<><><>

ಕಾನೂನು ಬದ್ಧ, ಮಕ್ಕಳ ದತ್ತು ಸ್ವೀಕಾರ ಕ್ರಮಕ್ಕೆ, ಜಿಲ್ಲಾವಾರು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ಆಸಕ್ತ ಪಾಲಕರಿಗೆ ಮಾರ್ಗದರ್ಶನ ಮಾಡಲಿದ್ದಾರೆ. ದತ್ತು ಪ್ರಕ್ರಿಯೆ ಅನಾಥ, ಪರಿತ್ಯಕ್ತ ಮತ್ತು ನಿರ್ಗತಿಕ ಮಕ್ಕಳ ಪುನರ್ವಸತಿಗೆ ಸಹಾಯ ಮಾಡುವ ಕಾನೂನು ಬದ್ಧ, ಮಾನವೀಯ ನೆಲೆಯ ಕ್ರಮವಾಗಿದೆ. ಮಗು ದತ್ತು ಪಡೆದು ಪೋಷಿಸಲು ಆಸಕ್ತ ದಂಪತಿಗಳು, cara.wcd.nic.in ಜಾಲತಾಣದಲ್ಲಿ, ಹೆಸರು ನೊಂದಾಯಿಸುವುದು ಕಡ್ಡಾಯ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಗುಣಪಡಿಸಲಾಗದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು, ಘನತೆಯಿಂದ ಮರಣ ಹೊಂದುವ ಹಕ್ಕು, ರಾಜ್ಯದಲ್ಲಿ ಜಾರಿಗೊಂಡಿದೆ. ದಯಾ ಮರಣ ಹಕ್ಕು ಅನುಷ್ಠಾನಕ್ಕೆ ಆಗ್ರಹಿಸಿ, ನಿರಂತರ ಹೋರಾಟ ನಡೆಸಿದ, ದಾವಣಗೆರೆಯ ನಿವೃತ್ತ ಶಿಕ್ಷಕಿ ಎಚ್.ಬಿ.ಕರಿಬಸಮ್ಮ, ಘನತೆಯ ಸಾವಿನ ಹಕ್ಕು ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಳೆದ 24 ವರ್ಷಗಳಿಂದ ಕರುಳಿನ ಕ್ಯಾನ್ಸರ್ ನೊಂದಿಗೆ ಹೋರಾಡುತ್ತಿರುವ ಕರಿಬಸಮ್ಮ, ಸುಧೀರ್ಘ 21 ವರ್ಷಗಳಿಂದ, ದಯಾ ಮರಣದ ಹಕ್ಕು ಕೋರಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಗಮನ ಸೆಳೆದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಿಕ್ಷಕಿ ಎಚ್.ಬಿ. ಕರಿಬಸಮ್ಮ ಧ್ವನಿ 40 ಸೆಕೆಂದುಗಳು

<><><>

ಉತ್ತರ ಕರ್ನಾಟಕ ಭಾಗದಿಂದ, ಜೀವನೋಪಾಯಕ್ಕಾಗಿ ಗೋವಾಕ್ಕೆ ತೆರಳುವ, ಕರ್ನಾಟಕದ ವಲಸೆ ಕಾರ್ಮಿಕರಿಗೆ, ಸೂಕ್ತ ರಕ್ಷಣೆ ಒದಗಿಸುವಂತೆ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರಿಗೆ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್ ಮನವಿ ಮಾಡಿದ್ದಾರೆ. ಕರ್ನಾಟಕದ ವಲಸೆ ಕಾರ್ಮಿಕರ ದುಃಸ್ಥಿತಿ ಬಗ್ಗೆ, ತಮ್ಮ ಗಮನಕ್ಕೆ ಬಂದಿದೆ. ಸ್ಥಳೀಯರಿಂದ ಕನ್ನಡಿಗರಿಗೆ ತೊಂದರೆಯಾಗದಂತೆ, ಪರಿಹಾರ ಕ್ರಮ ಕೈಗೊಳ್ಳುವಂತೆ, ಮನವಿಯಲ್ಲಿ ಕೋರಿದ್ದಾರೆ. ಸಾರ್ವಜನಿಕ ಪಡಿತರ ವ್ಯವಸ್ಥೆ, ಆರೋಗ್ಯ ಸೌಲಭ್ಯ ಸೇರಿದಂತೆ, ಇತರೆ ಸಾಮಾಜಿಕ ಭದ್ರತೆ ಯೋಜನೆಗಳನ್ನು, ಕರ್ನಾಟಕದ ವಲಸೆ ಕಾರ್ಮಿಕರಿಗೆ ವಿಸ್ತರಿಸುವಂತೆ, ಸಚಿವ ಲಾಡ್ ವಿನಂತಿಸಿದ್ದಾರೆ.

<><><>

ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಓಡಾಡುವ, ಎಲ್ಲ ವಾಹನಗಳ ಗಣತಿ ಕಾರ್ಯ, ಇಂದು ಬೆಳಗ್ಗೆ 6 ಗಂಟೆಗೆ ರಾಜ್ಯಾದ್ಯಂತ ಆರಂಭಗೊಂಡಿದೆ. ಬರುವ 24ನೇ ತಾರೀಖು, ಸೋಮವಾರ ಬೆಳಗ್ಗೆ 6 ಗಂಟೆಯ ವರೆಗೆ, ಸತತ 7 ದಿನಗಳ ಕಾಲ ನಡೆಯಲಿದೆ. ಗಣತಿಗೆ 5 ಸಾವಿರದ 30 ಗಣತಿ ಕೇಂದ್ರಗಳನ್ನು, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳ ಮೇಲೆ, ನಿಗದಿ ಪಡಿಸಲಾಗಿದೆ.

<><><>

ವಾಹನ ಸಂಚಾರದ ಬೆಳವಣಿಗೆ ತೀವ್ರತೆಯನ್ನು ಗಮನಿಸಿ, ರಸ್ತೆಗಳ ಮೇಲ್ಮೈಯನ್ನು ಅಭಿವೃದ್ಧಿ ಪಡಿಸುವುದು, ರಸ್ತೆಗಳ ಅಗಲೀಕರಣ, ಮೇಲ್ದರ್ಜೆಗೇರಿಸುವುದು, ಈ ಗಣತಿಯ ಮುಖ್ಯ ಉದ್ದೇಶವಾಗಿದೆ.

<><><>

ವಾಹನ ಸಂಚಾರ ವಿವರಗಳನ್ನು ಸಂಗ್ರಹಿಸಲು, ರಾಜ್ಯದಲ್ಲಿ ಸ್ಥಾಪಿಸಲಾದ, 5 ಸಾವಿರದ 30 ಗಣತಿ ಕೇಂದ್ರಗಳಲ್ಲಿ, ಸಹಾಯಕ ಅಭಿಯಂತರ ಹಾಗೂ ಕಿರಿಯ ಅಭಿಯಂತರುಗಳನ್ನು ನೇಮಿಸಲಾಗಿದೆ.

<><><>

ವಾಹನ ಸಂಚಾರ ಗಣತಿ ಯಶಸ್ವಿಗೊಳಿಸಲು, ವಾಹನ ಚಾಲಕರು ಮತ್ತು ಸಾರ್ವಜನಿಕರು ಸಹಕರಿಸಲು, ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರರು ಕೋರಿದ್ದಾರೆ.

<><><>

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮಾಧ್ಯಮ ಅಕಾದೆಮಿ ಹಾಗೂ ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದ ಸಹಯೋಗದಲ್ಲಿ, ಇಂದಿನಿಂದ ಎರಡು ದಿನಗಳ ಕಾಲ, 'ಕಲ್ಯಾಣ ಕರ್ನಾಟಕ ಮಿಡಯಾ ಹಬ್ಬ' ಆಯೋಜಿತವಾಗಿದೆ. ಶರಣಬಸವ ವಿಶ್ವವಿದ್ಯಾಲಯದಲ್ಲಿ ಇಂದು ಬೆಳಗ್ಗೆ 10 ಗಂಟೆಗೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ, ಅಜಯ ಧರ್ಮಸಿಂಗ್, ಕಾರ್ಯಾಗಾರ ಉದ್ಘಾಟಿಸುವರು. ಕಲಬುರಗಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ, ಮಾತೋಶ್ರೀ ದಾಕ್ಷಾಯಿಣಿ ಅವ್ವಾ ಅವರು, ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸಮುದ್ರ ಗಸ್ತು ಬೋಟುಗಳಿಗೆ ಸಂಬಂಧಿಸಿ, ಯಾವುದೇ ಇಂಧನ ಮಿತಿ ನಿಗದಿ ಪಡಿಸಲಾಗಿಲ್ಲ; ಅಗತ್ಯತೆಗೆ ಅನುಗುಣವಾಗಿ, ಪೂರೈಕೆ ಲಭ್ಯವಿದೆ ಎಂದು, ಉಡುಪಿ ಜಿಲ್ಲೆಯ, ಕರಾವಳಿ ಕಾವಲು ಪೊಲೀಸ್ ಅಧೀಕ್ಷಕರು, ಸ್ಪಷ್ಟ ಪಡಿಸಿದ್ದಾರೆ.

<><><>

ಬೀದರ್‌ನ ಹೆಸರಾಂತ ಕ್ಯಾನ್ಸರ್ ಚಿಕಿತ್ಸೆ ತಜ್ಞ ವೈದ್ಯ, ವಿಪಿನ್ ಗೋಯಲ್, ಈಥಿಯೋಪಿಯಾದ 'ಅದ್ದೀಸ್ ಅಬಾಬ',ದಲ್ಲಿ ಬರುವ 20 ರಂದು ಆಯೋಜಿತ, ಅಂತಾರಾಷ್ಟ್ರೀಯ ಆರೋಗ್ಯ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

<><><>

ಸಹಕಾರ ಇಲಾಖೆ, 'ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ' ಅಡಿ, ಹೊಸದಾಗಿ ಸದಸ್ಯರನ್ನು ನೊಂದಾಯಿಸಲು ಹಾಗೂ ಸದಸ್ಯತ್ವ ನವೀಕರಿಸಲು, ಮಾರ್ಚ್ 31ರ ವರೆಗೆ ಅವಕಾಶವಿದೆ.

<><><>

ಮಾರ್ಚ್ 2 ರಿಂದ 4ರ ವರೆಗೆ, ಬೀದರ್‌ನಲ್ಲಿ ನಡೆಯುವ, 15ನೇ ರಾಜ್ಯ ಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನವನ್ನು, ಯಶಸ್ವಿಯಾಗಿ ಸಂಘಟಿಸಲು, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಪೂರ್ವಭಾವಿ ಸಿದ್ಧತಾ ಸಭೆ ನಡೆಸಿದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ, ಶ್ರೀ ಪುರಂದರ ದಾಸರು ಮತ್ತು ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ, ಶ್ರದ್ಧಾ ಭಕ್ತಿಯಿಂದ ನಡೆಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಿಷನ್ ವಿದ್ಯಾಕಾಶಿ; 10ನೇ ತರಗತಿ ಫಲಿತಾಂಶ ಸುಧಾರಣೆಗೆ, ಧಾರವಾಡ ಐ.ಐ.ಟಿ. ತಜ್ಞರಿಂದ ಮಾರ್ಗದರ್ಶನ.
- ರಾಜ್ಯದ ನೀರಾವರಿ ಯೋಜನೆಗಳ, ಕಾಲಮಿತಿ ಅನುಷ್ಠಾನಕ್ಕೆ, ಕೇಂದ್ರದ ಮನವೊಲಿಸುವಂತೆ, ದೇವೇಗೌಡರಿಗೆ, ಸಿದ್ದರಾಮಯ್ಯ ಮನವಿ.
- ಉತ್ತರ ಕರ್ನಾಟಕದ ವಲಸೆ ಕಾರ್ಮಿಕರಿಗೆ, ರಕ್ಷಣೆ ಒದಗಿಸಲು, ಗೋವಾ ಮುಖ್ಯಮಂತ್ರಿಗೆ, ರಾಜ್ಯ ಸರ್ಕಾರದ ಮನವಿ.

- ಲೋಕೋಪಯೋಗಿ ಇಲಾಖೆಯಿಂದ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ, ವಾಹನ ಗಣತಿ ಕಾರ್ಯ, ಈ ಬೆಳಗ್ಗೆ ಆರಂಭ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>